ಪರಿಹಾರ ಧನವನ್ನು ನೀಡುವರೆ ಎಂದು ಕೇಳಿದ್ದೆ, ಅದಕ್ಕೆ ಉತ್ತರವಾಗಿ ನಾಶವಾದ ಪ್ರತಿ ಹೆಕ್ಟೇರ್‌ಗೆ 500ರೂ.ಗಳಂತೆ ಪರಿಹಾರವನ್ನು ಸಾಮಗ್ರಿಗಳ ಮೂಲಕ ನೀಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಕಂದಾಯ ಸಚಿವರು ಕೂಡ ನಮ್ಮ ಕ್ಷೇತ್ರಕ್ಕೆ ಬಂದು ಪರಿಸ್ಥಿತಿಯನ್ನು ಕಣ್ಣಾರೆ ನೋಡಿದ್ದಾರೆ. ಸರ್ವೆ ಮಾಡುವ ಸಮಯದಲ್ಲಿ ಪ್ರತಿ ಹಳ್ಳಿಗಳಲ್ಲಿ 30–40 ಮನೆಗಳು ಬಿದ್ದಿರುವುದನ್ನು ಅವರು ನೋಡಿದ್ದಾರೆ. ಪರಿಹಾರವನ್ನು ನೀಡುವಲ್ಲಿ ಕೂಡ ಸಾಕಷ್ಟು ಅವ್ಯವಹಾರವಾಗಿ ಯಾರಿಗೆ ಮನೆ ಬಿದ್ದು ಹೋಗಿ ಪರಿಹಾರ ಸಿಗಬೇಕಾಗಿತ್ತು ಅವರಿಗೆ ಸಿಕ್ಕಿಲ್ಲ. ಮನೆ ಬೀಳಲಾರದವರಿಗೆ ಪರಿಹಾರ ಸಿಕ್ಕಿದೆ. ಹಾಗೆಯೇ ನಾಶವಾದ ಬೆಳೆಗಳ ಬಗ್ಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಮತ್ತೆ ಸರಕಾರದವರು ಬೇಸಿಗೆ ಬೆಳೆ ಬೆಳೆದವರಿಗೆ ಮಾತ್ರ ಪರಿಹಾರವನ್ನು ಕೊಡಬೇಕೆಂದು ಆದೇಶ ಹೊರಡಿಸಿದ್ದಾರೆ ಎಂದು ತಿಳಿದು ಬಂದಿದೆ. ಇದು ಹೌದೋ ಅಲ್ಲವೋ ಎಂಬ ಬಗ್ಗೆ ತಿಳಿಸಬೇಕು. ಹಾಗೆಯೇ ಈ 9 ಗ್ರಾಮಗಳು ನೆಲಸಮವಾಗಿದ್ದು ಅಲ್ಲಿ ಇದುವರೆಗೂ ಏನೂ ಪರಿಹಾರ ಕ್ರಮ ತೆಗೆದುಕೊಳ್ಳುವ ದಿಶೆಯಲ್ಲಿ ಪುನರ್ ವಸತಿ ಕಾರ್ಯಕ್ರಮ ಮಾಡುವುದು, ಭೂಮಿ ತೆಗೆದುಕೊಳ್ಳುವುದು, ಅಥವಾ ತಾವುಗಳು ಕೊಟ್ಟ ಸಾಮಗ್ರಿಗಳನ್ನು ಬಳಸಿಕೊಳ್ಳಲು ಅವರಿಗೆ ಒಂದು ಜಾಗವಾದರೂ ಬೇಕಲ್ಲ ? ಈ ಎಲ್ಲಾ ವಿಚಾರಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆದಾಗಿ ಪರಿಹಾರ ಧನ ಕೊಟ್ಟಿರುವುದರಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಎಲ್ಲೆಲ್ಲಿ ಅವ್ಯವಹಾರವಾಗಿದೆ ಅದನ್ನು ವಿಚಾರಣೆ ಮಾಡಬೇಕೆಂದು ಆದೇಶಿಸಿದ್ದೇನೆ. ಫಸಲು ನಷ್ಟವಾಗಿರತಕ್ಕಂಥಾದ್ದರ ಬಗ್ಗೆ ಇನ್ನೂ ಕೆಲವು ಕಡೆಗಳಲ್ಲಿ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಇಂಥ ಸ್ಥಳಗಳಲ್ಲಿ ಪರಿಹಾರ ಸಿಕ್ಕಿಲ್ಲ ಎಂಬ ಮಾಹಿತಿಗಳನ್ನು ಕಳುಹಿಸಿಕೊಟ್ಟರೆ, ಅಂಥವುಗಳು ಜಿನ್ಯೂವನ್ ಆಗಿದೆಯೇ ಎಂಬುದನ್ನು ಪರೀಕ್ಷೆ ಮಾಡಿ, ಅವುಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಪಂಪ್‌ಸೆಟ್‌ಗಳಿಗೆ ಅಮೌಂಟನ್ನು ರಿಲೀಸ್ ಮಾಡಿದ್ದೇವೆ. ಬಹುಶಃ ಇನ್ನೂ ಮೂರು ನಾಲ್ಕು ದಿವಸಗಳೊಳಗಾಗಿ ಅಮೌಂಟನ್ನು ಪೇ ಮಾಡುತ್ತೇವೆ.

ಶ್ರೀ ಬಾದರಹಳ್ಳಿ ಹಂಪನಗೌಡ:– ಮಾನ್ಯ ಅಧ್ಯಕ್ಷರೇ, ನೆರೆಹಾವಳಿಯಲ್ಲಿ ರೈತರ ಜಮೀನು ಸುಮಾರು ಒಂದು ಲಕ್ಷಕ್ಕೂ ಮೇಲ್ಪಟ್ಟು ಬೆಳೆ ನಾಶವಾಗಿದೆ. ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. ತಾವು ಆದೇಶ ಏನು ಕೊಟ್ಟಿದ್ದೀರಿ ಅಂದರೆ ಬೇಸಿಗೆ ಬೆಳೆಯನ್ನು ಯಾರು ಹಾಕುತ್ತಾರೋ ಅವರಿಗೆ ಮಾತ್ರ ಪರಿಹಾರ ನೀಡಬೇಕು. ನವೆಂಬರ್ ತಿಂಗಳಲ್ಲಿ ಯಾರದ್ದು ನಾಶವಾಗಿದೆ ಅವರಿಗೆ ಪರಿಹಾರವನ್ನು ನೀಡುವುದು ಬಿಟ್ಟು ಬೇಸಿಗೆ ಬೆಳೆಯಲ್ಲಿ ಆದವರಿಗೆ ಪರಿಹಾರ ನೀಡುವಂತಹ ಆದೇಶ ಕಳುಹಿಸಿದರೆ ಇದು ಯಾವ ನ್ಯಾಯ ? ತಾವು ಆದೇಶವನ್ನು ತರಿಸಿ ನೋಡಿ. ಅದು ಆಗಿದೆಯೋ ಇಲ್ಲವೋ ?

SRI M. RAJASHEKARA MURTHY:– If any such Circular has gone to the Deputy Commissioner I will see it is withdrawn.

ಮುಜರಾಯಿ ಇಲಾಖೆಗಳಿಗೆ ಕಟ್ಟಡಗಳ ನಿರ್ಮಾಣ

(1949): ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):– ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಮುಜರಾಯಿ ಇಲಾಖೆಗೆ ಸಂಬಂಧಿಸಿದ ಜಮೀನನ್ನು 22 ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದ್ದು, ಕೇವಲ 3 ಸಂಸ್ಥೆಗಳು ಮಾತ್ರ ಕಟ್ಟಡ ಪೂರ್ತಿಯಾಗಿಲ್ಲವೆಂದು ತಿಳಿಸಿರುತ್ತೀರಿ, ಅವು ಯಾವುವು;

2. ಕಟ್ಟಡ ಕಟ್ಟಲು ಇನ್ನು ಎಷ್ಟು ಕಾಲಾವಕಾಶ ಇದೆ;

3. ಸಮಯಕ್ಕೆ ಸರಿಯಾಗಿ ಕಟ್ಟಡ ಕಟ್ಟದಿದ್ದಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

1. ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ, ಮಲ್ಲೇಶ್ವರಂ ಬೆಂಗಳೂರು.
2. ಶ್ರೀ ಬಿ.ಎಂ. ಶ್ರೀನಿವಾಸಯ್ಯ ಶಿಕ್ಷಣ ಸಂಸ್ಥೆ, ಬಸವನಗುಡಿ, ಬೆಂಗಳೂರು.
3. ಶ್ರೀ ಕೆ.ಎಂ. ನಾಗೇಂದ್ರಪ್ಪ, ಯಶವಂತಪುರ, ಬೆಂಗಳೂರು.

1. ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ ಅವರಿಗೆ ದಿನಾಂಕ: 19.9.1991ರಂದು ನಿವೇಶನದ ಸ್ವಾಧೀನತೆ ನೀಡಿರುವುದರಿಂದ, 2 ವರ್ಷಗಳ ಕಾಲಾವಕಾಶ ಇದೆ.
2. ಶ್ರೀ ಬಿ.ಎಂ. ಶ್ರೀನಿವಾಸಯ್ಯ ಶಿಕ್ಷಣ ಸಂಸ್ಥೆಗೆ ದಿನಾಂಕ: 6.9.91ರಂದು ನಿವೇಶನದ ಸ್ವಾಧೀನತೆ ನೀಡಿರುವುದರಿಂದ 5 ವರ್ಷಗಳ ಕಾಲಾವಕಾಶ ಇದೆ.
3. ಶ್ರೀ ಕೆ.ಎಂ. ನಾಗೇಂದ್ರಪ್ಪ ಅವರಿಗೆ ಗುತ್ತಿಗೆ ಕರಾರಿನಲ್ಲಿ ಇಂತಿಷ್ಟೇ ಸಮಯದಲ್ಲಿ ಕಟ್ಟಡ ನಿರ್ಮಿಸಬೇಕೆಂದು ಷರತ್ತು ಇರುವುದಿಲ್ಲ, ಗುತ್ತಿಗೆ ಅವಧಿ 24.2.99 ರ ತನಕ ಕಾಲಾವಕಾಶ ಇದೆ.

3. ನಿಗದಿತ ಅವಧಿಯಲ್ಲಿ ಕಟ್ಟಡ ನಿರ್ಮಿಸದಿದ್ದಲ್ಲಿ ಕರಾರಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀಮತಿ ಸುಮಾ ವಸಂತ:– ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ ಅವರಿಗೆ ದಿನಾಂಕ: 19.9.1991ರಂದು ನಿವೇಶನದ ಸ್ವಾಧೀನತೆ ನೀಡಿರುವುದರಿಂದ, 2 ವರ್ಷಗಳ ಕಾಲಾವಕಾಶ ಇದೆ ಎಂದು ಹೇಳಿದ್ದಾರೆ. ಇವರು ಈ ನಿವೇಶನಗಳ 22 ಸಂಸ್ಥೆಗಳಿಗೆ ಗುತ್ತಿಗೆಯನ್ನು ಯಾವಾಗ ನೀಡಲಾಗಿದೆ, ಮತ್ತು ಇದರ ಮಧ್ಯೆ ಸರ್ಕಾರ ಏನು ಮಾಡುತ್ತಿತ್ತು ಎಂದು ಕೇಳುತ್ತಿದ್ದೇನೆ, ಇವರು ಕಂಡೀಷನ್ ಅನ್ನು ಸರಿಯಾಗಿ ಪಾಲನೆ ಮಾಡಬೇಕು ಎಂದು ನಿಯಮಗಳು ಇಲ್ಲವೇ, ಇದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ಅಧ್ಯಕ್ಷರೆ, ಕಂಡೀಷನ್ ಪಾಲನೆ ಮಾಡಬೇಕೆಂದು ನಿಯಮ ಇದೆ. ಅವರು ಇಷ್ಟೆ ದಿವಸದಲ್ಲಿ ಕಟ್ಟಡವನ್ನು ಕಟ್ಟಬೇಕೆಂದು ಅಗ್ರಿಮೆಂಟ್‌ನಲ್ಲಿ ಹೇಳಿಲ್ಲ. ಇನ್ನು ಉಳಿದ ಕಡೆ ಇಷ್ಟು ವರ್ಷದಲ್ಲಿ ಅಗ್ರಿಮೆಂಟ್ ಪ್ರಕಾರ ಕಟ್ಟಡವನ್ನು ಕಟ್ಟಬೇಕೆಂದು ಹೇಳಿದ್ದಾರೆ. ಆ ಕಟ್ಟಡವನ್ನು ಅವರು ಕಟ್ಟದೇ ಹೋದರೆ ಅವರಿಗೆ ನೋಟೀಸ್ ಕೊಟ್ಟುಬಿಟ್ಟು ವಾಪಸ್ಸು ಲೀಸ್ ಏನು ಕೊಟ್ಟಿದೆ ಅದನ್ನು ರದ್ದು ಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಭೂಮಿ ಸಕ್ರಮಕ್ಕೆ ಅರ್ಜಿಗಳು

(2009): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡ ಜಿಲ್ಲೆಯ ಅಕ್ರಮಿತ ಭೂಮಿ ಸಕ್ರಮಿಸುವ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ;

ಆ. ಎಷ್ಟು ಅರ್ಜಿಗಳು ತೀರ್ಮಾನವಾಗಿವೆ;

ಇ. ಒಟ್ಟು ಎಷ್ಟು ಎಕರೆ ಭೂಮಿಯನ್ನು ಎಷ್ಟು ಜನರಿಗೆ ಸಕ್ರಮಿಸಲಾಗಿದೆ;

ಈ. ಈ ಸಮಿತಿಯ ಸದಸ್ಯರಿಗೆ ಸಂಭಾವನೆ ಕೊಡುವ ಆಲೋಚನೆ ಇದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–